# ವಾರ್ತಾ ವಿಶ್ಲೇಷಣೆ

## ಶಾಂತಿಯ ಸಂಸ್ಕೃತಿ

೨೦೦೧-೨೦೧೦ರ ದಶಕವನ್ನು ಜಗತ್ತಿನ ಮಕ್ಕಳಿಗಾಗಿ ಶಾಂತಿ ಮತ್ತು ಅಹಿಂಸಾ ಸಂಸ್ಕೃತಿಯ ಅಂತರ್‌ರಾಷ್ಟ್ರೀಯ ದಶಕವೆಂದು ಪರಿಗಣಿಸಲಾಗಿದೆ. ಶಾಂತಿ ಮತ್ತು ಅಹಿಂಸಾ ತತ್ತ್ವವನ್ನು ಮಕ್ಕಳಿಗೆ ಬೋಧಿಸಬೇಕು ಮತ್ತು ಇದರಿಂದ ಅವರು ಮುಂದೆ ಇದೇ ತತ್ತ್ವವನ್ನು ಪಾಲಿಸುತ್ತಾರೆ. ಅವರಿಗೆ ಈ ತತ್ತ್ವವನ್ನು ಬೋಧಿಸುವುದಕ್ಕಿಂತ ಅವರನ್ನು ಶಾಂತಿ ಮತ್ತು ಅಹಿಂಸೆಯ ವಾತಾವರಣದಲ್ಲಿ ಬೆಳೆಸುವುದು ಮುಖ್ಯ.

ಒಂದು ಮಗು ಹುಟ್ಟಿಬರುವಾಗ ಶುಭ ಮತ್ತು ಅಶುಭ ಅನೇಕ ಸಂಸ್ಕಾರಗಳನ್ನು ಹೊತ್ತುಕೊಂಡುಬರುತ್ತದೆ. ಮಗುವಿನಲ್ಲಿ ಹಿಂಸಾತ್ಮಕ ಪ್ರವೃತ್ತಿಯೂ ಇರುತ್ತದೆ, ಸ್ನೇಹ ಪ್ರವೃತ್ತಿಯೂ ಇರುತ್ತದೆ. ಒಂದು ಕಡೆ ಅದು ಇತರರೊಡನೆ ಸಂಬಂಧವನ್ನು ಬಯಸುತ್ತದೆ, ಮತ್ತೊಂದು ಕಡೆ ಎಲ್ಲವನ್ನು ನಾಶಮಾಡುವ, ಹಿಂಸಿಸುವ ಸ್ವಭಾವವನ್ನು ವ್ಯಕ್ತಪಡಿಸುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಮಕ್ಕಳಲ್ಲಿ ಜ್ಞಾನಾರ್ಜನೆಯ ಹಂಬಲವಿರುತ್ತದೆ. ಅವರು ಅದು ಏನು, ಇದು ಏನು, ಅದು ಏಕೆ, ಇದು ಏಕೆ, ಇದು ಹೀಗೇಕೆ ಎಂದು ನಿರಂತರವಾಗಿ ಪ್ರಶ್ನಿಸುತ್ತಿರುತ್ತಾರೆ. ಹಿರಿಯರು ಅವರ ಈ ಕುತೂಹಲವನ್ನು ಪೂರ್ತಿಗೊಳಿಸಲು ಅಸಮರ್ಥರಾದರೆ ಮಕ್ಕಳ ಆ ಜ್ಞಾನಾರ್ಜನೆಯ ಪ್ರವೃತ್ತಿಯನ್ನೆ ಹಿಸುಕಿದಂತಾಗುತ್ತದೆ. ಇದರಿಂದ ಮಕ್ಕಳಲ್ಲಿರುವ ಹಿಂಸಾತ್ಮಕ ಪ್ರವೃತ್ತಿ ಹೆಚ್ಚು ಜಾಗೃತಿಯನ್ನು ಪಡೆಯುತ್ತದೆ. ಜ್ಞಾನಾರ್ಜನೆಯಿಂದ ದೊರೆಯುವ ಆನಂದ ಮತ್ತು ತೃಪ್ತಿ ಅವರಿಗೆ ದೊರೆಯದಿದ್ದಾಗ ಕಳಪೆ ಮನರಂಜನೆಯ ಕಡೆ ಅವರ ಮನಸ್ಸು ವಾಲುತ್ತದೆ.

ಈಗ ಮಕ್ಕಳಿಗೆ ಶಿಕ್ಷಣ ದೊರೆತರೂ ಕೂಡ ತಾಂತ್ರಿಕ ಶಿಕ್ಷಣದ ಕಡೆಗೇ ಹೆಚ್ಚು ಒತ್ತು ಇರುವುದರಿಂದ ಅವರ ನಿಜವಾದ ಜ್ಞಾನಾರ್ಜನೆಯ ಹಂಬಲ ತೃಪ್ತಿಯಾಗುವುದಿಲ್ಲ. ಆದ್ದರಿಂದಲೇ ಇಂದು ಶಿಕ್ಷಿತ ವ್ಯಕ್ತಿಗಳೂ ಕೂಡ ಭ್ರಷ್ಟಾಚಾರ ಮತ್ತು ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗುತ್ತಿರುವುದು. ಶುದ್ಧವಿಜ್ಞಾನ ಮತ್ತು ಮಾನವಿಕ ವಿಷಯಗಳನ್ನು ಈಗ ಕಡೆಗಣಿಸಲಾಗುತ್ತಿರುವುದರಿಂದ ನಾವು ನಮ್ಮ ಸಂಸ್ಕೃತಿಯ ಮೂಲದಿಂದ ದೂರವಾಗುತ್ತಿದ್ದೇವೆ, ಮಾನವತೆಯಿಂದ ದೂರವಾಗುತ್ತಿದ್ದೇವೆ. ನಾವು ಕಲೆಹಾಕುತ್ತೇವೆಯೆ ಹೊರತು ಕಲೆತು ಬಾಳುವುದನ್ನು ಕಲಿಯುತ್ತಿಲ್ಲ. ನಾವು ದುಡಿಯುವುದನ್ನು ಕಲಿಯುತ್ತೇವೆಯೆ ಹೊರತು ಬಾಳುವುದನ್ನು ಕಲಿಯುತ್ತಿಲ್ಲ.

ಇಂದಿನ ಭಯೋತ್ಪಾದನೆಯ ಅತಿರೇಕ ಜನರನ್ನು ಎಚ್ಚರಿಸುತ್ತಿರುವಂತಿದೆ. ಒಂದು ಮೂಲಭೂತ ಬದಲಾವಣೆ ಆವಶ್ಯಕ ಎಂದು ಅವರು ಗಂಭೀರವಾಗಿ ಚಿಂತಿಸುವಂತೆ ಮಾಡಿದೆ. ಅದಕ್ಕಾಗಿಯೆ ಮಕ್ಕಳ ಬೆಳವಣಿಗೆಗೆ ಹೆಚ್ಚು ಒತ್ತನ್ನು ನೀಡುವುದಕ್ಕಾಗಿ ಈ ದಶಕವನ್ನು ಮಕ್ಕಳಿಗೆ ಶಾಂತಿ ಮತ್ತು ಅಹಿಂಸಾಸಂಸ್ಕೃತಿಯ ದಶಕವಾಗಿ ಸಾರಲಾಗಿದೆ. ಇದು ಸ್ತುತ್ಯರ್ಹ.

ಮಕ್ಕಳಲ್ಲಿ ಮುಖ್ಯವಾಗಿ ಎರಡು ಪ್ರವೃತ್ತಿಗಳಿಗೆ ನಾವು ಒತ್ತನ್ನು ನೀಡಬೇಕಾಗಿದೆ. ಒಂದು ಸಾಂಬಂಧಿಕ ಪ್ರವೃತ್ತಿ ಮತ್ತು ಜ್ಞಾನಾರ್ಜನೆಯ ಪ್ರವೃತ್ತಿ. ಈ ಎರಡೂ ಪ್ರವೃತ್ತಿಗಳಿಗೆ ರಚನಾತ್ಮಕವಾದ ಅಭಿವ್ಯಕ್ತಿಯನ್ನು ನೀಡುವುದರ ಮೂಲಕ ಮಕ್ಕಳು ಮುಂದೆ ಉತ್ತಮ ಪ್ರಜೆಗಳಾಗುತ್ತಾರೆ ಎಂಬುವದರಲ್ಲಿ ಸಂದೇಹವಿಲ್ಲ. ❖

## ಅಸಾಮಾನ್ಯ ಮಾನವ

ಮಾನವನ ಸಾಮರ್ಥ್ಯ ಅಪಾರ, ಅದಕ್ಕೆ ಮಿತಿಯೇ ಇಲ್ಲವೇನೊ ಎಂದೆನಿಸುತ್ತದೆ. ಆದರೆ ಈ ಶಕ್ತಿ ಮತ್ತು ಸಾಮರ್ಥ್ಯವನ್ನು ಬಡಿದೆಬ್ಬಿಸುವುದು, ಸ್ವಾಮಿ ವಿವೇಕಾನಂದರು ಹೇಳುವಂತೆ, ಆತ್ಮವಿಶ್ವಾಸ. ಮಾನವ ಮಾನವನಿಗೂ ಇರುವ ವ್ಯತ್ಯಾಸ ಆತ್ಮವಿಶ್ವಾಸದಲ್ಲಿದೆ ಎನ್ನುತ್ತಾರೆ ಸ್ವಾಮೀಜಿ.

ಜಾರ್ಜ್ ಡಾಸನ್ (George Dawson) ಎಂಬ ಅಮೆರಿಕನ್ ಕರಿಯ ವ್ಯಕ್ತಿ ತಮ್ಮ ೯೮ನೆ ವಯಸ್ಸಿನಲ್ಲಿ ಓದು ಬರಹ ಕಲಿತರು. ಮತ್ತೆ ನಾಲ್ಕು ವರ್ಷಗಳಲ್ಲಿ, ಅಂದರೆ ಅವರಿಗೆ ೧೦೨ ವರ್ಷವಾಗಿದ್ದಾಗ, ತಮ್ಮ ಆತ್ಮಚರಿತ್ರೆಗೆ ಸಂಬಂಧಿಸಿದ *Life is so Good* ಎಂಬ ಗ್ರಂಥವನ್ನು ಬರೆದರು. ತಮ್ಮ ೧೦೩ನೆ ವಯಸ್ಸಿನಲ್ಲಿ ಕಾಲವಾದರು. ಅಮೆರಿಕದಲ್ಲಿ ಅವರ ಪುಸ್ತಕ ಅತ್ಯಂತ ಜನಪ್ರಿಯವಾಯಿತು, ಅವರು ಸಾಕ್ಷರತೆಯ ಒಂದು ಅಪೂರ್ವ ಸಂಕೇತವಾದರು. ಅವರು ೧೮೯೮ರಲ್ಲಿ ಒಬ್ಬ ಗುಲಾಮನ ಮಗನಾಗಿ ಜನಿಸಿದರು. ಅನೇಕ ವರ್ಷಗಳು ಬೇರೆ ಬೇರೆ ಕಡೆಗಳಲ್ಲಿ ಅವರು ಸಾಮಾನ್ಯ ಕೂಲಿಕಾರರಾಗಿ ದುಡಿಯಬೇಕಾಯಿತು. ತಮ್ಮ ಇಬ್ಬರು ಮಕ್ಕಳನ್ನು ಓದಿಸಿದರು. ಆದರೆ ತಾವು ವಿದ್ಯಾಭ್ಯಾಸ ಮಾಡಲು ಸಮಯವಾಗಲಿ, ಧನವಾಗಲಿ, ಅವಕಾಶವಾಗಲಿ ಇರಲಿಲ್ಲ. ೧೯೯೬ರಲ್ಲಿ ಈ ಅವಕಾಶ ಅವರ ಮನೆಯ ಬಾಗಿಲನ್ನು ತಟ್ಟಿತು. ಅವರು ಡಲ್ಲಾಸ್‌ನಲ್ಲಿ ಇರುವಾಗ ಅವರ ಮನೆಯ ಹತ್ತಿರದಲ್ಲೇ ಒಂದು ಹೈಸ್ಕೂಲ್‌ನಲ್ಲಿ ವಯಸ್ಕರ ಶಿಕ್ಷಣದ ಒಂದು ಕೋರ್ಸ್ ನಡೆಯುತ್ತಿತ್ತು. ಈ ವಿಷಯ ತಿಳಿದ ಕೂಡಲೇ ಅವರು ಅದಕ್ಕೆ ಸೇರಿಕೊಂಡರು. ಎರಡೇ ದಿನಗಳಲ್ಲಿ ಅವರು ABC ಕಲಿತರು, ತಮ್ಮ ಸಹಿ ಹಾಕುವುದನ್ನು ಕಲಿತರು. ಗ್ಲೌಬ್‌ಮನ್ ಎಂಬ ಬಿಳಿಯರು ಡಾಸನ್ ಅವರಿಗೆ ಪುಸ್ತಕ ಬರೆಯಲು ಸಹಾಯ ಮಾಡಿದರು.

ತಮ್ಮ ಪುಸ್ತಕದಲ್ಲಿ ಅವರು ತಮ್ಮ ಸುದೀರ್ಘ ಜೀವನದ ದುರಂತ ಚಿತ್ರವನ್ನು ನೀಡುತ್ತಾರೆ. ಆದರೆ ಎಲ್ಲಿಯೂ ಕಟುತ್ವದ ಸ್ವರವಿಲ್ಲ. ಅವರು ನಿವೃತ್ತರಾದಮೇಲೆ ಓರ್ವ ಮಹಿಳೆಗೆ ಸೇರಿದ ಹೊಲದಲ್ಲಿ ಕೆಲಸ ಮಾಡುತ್ತಿದ್ದರಂತೆ. ಆ ಸಂದರ್ಭದಲ್ಲಿ ಒಮ್ಮೆ ಆಕೆ ತನ್ನ ನಾಯಿಗಳು ಉಣ್ಣುವ ಜಾಗದಲ್ಲಿ ಇವರಿಗೆ ಊಟವನ್ನು ನೀಡಿದಾಗ ಇವರು ಆಕೆಗೆ ಮೃದುವಾಗಿ "ನಾನೊಬ್ಬ ಮನುಷ್ಯ" ಎಂದು ಹೇಳಿ ಉಪವಾಸವಿದ್ದರಂತೆ. ಎಷ್ಟೆಲ್ಲ ಕಷ್ಟ, ಸಂಕಟ, ಅವಮಾನ, ಅನ್ಯಾಯ ಕಹಿ ಇವುಗಳನ್ನು ಅನುಭವಿಸಿದರೂ ಡಾಸನ್ ಪಾಲಿಗೆ "ಜೀವನ ಅತ್ಯುತ್ತಮ" (Life is so Good) ಆಗಿತ್ತು.

"ಎಲ್ಲೆಲ್ಲಿ ಜೀವನವಿದೆಯೊ ಅದರ ಹಿಂದೆಲ್ಲ, ಅನಂತಶಕ್ತಿ ಭಂಡಾರವೇ ಇರುತ್ತದೆ" ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ❖